

# ಐಸ್‌ನಲ್ಲಿ ಹುಟ್ಟುವ ಸ್ಕಂಕ್ ಕ್ಯಾಬೇಜ್!

ಮಂಜಿನಂತಹ ಅತೀ ತಂಪನೆಯ ಜಾಗದಲ್ಲಿಯೂ ಸಸ್ಯಗಳು ಹುಟ್ಟುತ್ತವೆಯೇ? ಎಂಬ ಪ್ರಶ್ನೆ ನಿಮ್ಮ ಮನದಲ್ಲಿ ಮೂಡಿರಬಹುದು. ಪೂರ್ವ ಕೆನಡಾ ಮತ್ತು ಅಮೆರಿಕದ ಈಶಾನ್ಯ ಭಾಗದ ಕಾಡುಗಳಲ್ಲಿ ಚಳಿಗಾಲ ಕಳೆದು ವಸಂತಮಾಸದ ಆರಂಭವಾಗುವ ಕಾಲದಲ್ಲಿ ಮಂಜು ಇನ್ನೂ ನೆಲದ ಮೇಲೆ ಇರುವಾಗಲೇ ಕೊಳೆತ ವಾಸನೆಯ ಸಸ್ಯವೊಂದು ಹುಟ್ಟಿಕೊಳ್ಳಲಾರಂಭಿಸುತ್ತದೆ.

ಸ್ಕಂಕ್ ಕ್ಯಾಬೇಜ್ (ನೀಚ ಕೋಸು) ಎಂದು ಕರೆಯುವ ಈ ಗಿಡದ ವೈಜ್ಞಾನಿಕ ಹೆಸರು ಸಿಮ್ಪ್ಲೋಕಾರ್ಪಸ್ ಫೋಯಿಟಸ್. ಮಂಜನ್ನು ಸೀಳಿ ಚಿಗುರೊಡೆದು ನಂತರ ಹೂ ಬಿಡುವ ಈ ಸಸ್ಯ ತನ್ನ ಸುತ್ತಲೂ ನೀರಿನ ಪುಟ್ಟಕೊಳವನ್ನು ನಿರ್ಮಿಸುತ್ತದೆ. ಅರೆ ಇದು ಹೇಗೆ ಸಾಧ್ಯ? ಸೂರ್ಯನ ತಾಪಮಾನದಿಂದ ಗಿಡದ ಸುತ್ತಲಿನ ಮಂಜು ಕರಗಿರಬಹುದೇ ಎಂಬ ಅನುಮಾನ ಮೂಡುತ್ತದೆ. ಆದರೆ ಇಲ್ಲಿ ಸಸ್ಯದ ಉಷ್ಣತೆಯಿಂದಲೇ ಮಂಜು ಕರಗಿದುದೇ ಹೊರತು ಸೂರ್ಯನ ಕಾವಿನಿಂದಲ್ಲ!

ಸಸ್ಯದಿಂದಲೇ ಉಷ್ಣತೆ ಉತ್ಪತ್ತಿಯಾಗುವ ಸಾಮರ್ಥ್ಯವನ್ನು ಥರ್ಮೋಜೆನಿಸಿಸ್ ಎಂದು ಕರೆಯುತ್ತಾರೆ. ಹೂ ಬಿಡುವ ಪ್ರಾಚೀನ ಸಸ್ಯ ವರ್ಗದಲ್ಲಿ ಅತೀ ವಿರಳವಾದ ಈ ಜಾತಿಯ ಸಸ್ಯಗಳಲ್ಲಿ ಸ್ಕಂಕ್ ಕ್ಯಾಬೇಜ್ ಕೂಡಾ ಒಂದು.

■ ವಿದ್ಯಾ ವಿ. ಹಾಲಭಾವಿ

